ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು
ಕೃಷಿ ಹವಾಮಾನ ವಿಭಾಗ
ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು-65
ಪಟ್ರೇನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 24.09.2013

ಈ ವಾರದ ಮುನ್ಸೂಚನೆ (ದಿನಾಂಕ 25.09.13– 29.09.13 ವರೆಗೆ)

ನಿಯತಾಂಕಗಳು	25.09.13	26.09.13	27.09.13	28.09.13	29.09.13
ಮಳೆ (ಮಿ.ಮೀ)	0	3	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	30	29	30	29	30
ಕನಿಷ್ಠ ಉಷ್ಣಾಂಶ (ಡಿ.ಸೆ.)	18	18	19	19	19
ಮೋಡ (ಪ್ರಮಾಣ)	3	3	6	4	7
ಅರ್ದ್ರತೆ ೭.೨೦ ಬೆ (ಶೇ)	75	75	73	74	73
ಅರ್ದ್ರತೆ ೨.೨೦ ಮ (ಶೇ)	54	50	54	53	54
ಗಾಳಿಯ ವೇಗ (ಕಿ.ಮೀ/ಗಂಟೆಗೆ)	4	5	6	5	4
ಗಾಳಿಯ ದಿಕ್ಕು (ಡಿಗ್ರಿ)	250	250	250	260	270

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ಎಲ್ಲಾ ಐದು ದಿನಗಳಲ್ಲೂ ಮುಂಗಾರು ಕ್ಷೀಣಿಸಿದ್ದು, ಭಾಗಶಃ ಮೋಡ ಕವಿದ ವಾತಾವರಣವಿರುವ ಮುನ್ಸೂಚನೆಯಿದೆ. ದಿನದ ಗರಿಷ್ಠ ಉಷ್ಣಾಂಶವು 29.0-30.0^{o}C ಮತ್ತು ಕನಿಷ್ಠ 18-19°C ಇರಲಿದೆ. ಬೆಳಿಗಿನ ಅರ್ದ್ರತೆ ಪ್ರಮಾಣ ಶೇ 73-75 % ಇದ್ದು ಮಧ್ಯಾಹ್ನ 50-54% ಇರುವುದು ಮತ್ತು ಗಾಳಿಯು ನೈರುತ್ಯ ದಿಕ್ಕಿನಿಂದ ಗಂಟೆಗೆ ಸರಾಸರಿ 4-6 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಮುಂಗಾರು ಕ್ಷೀಣಿಸಿದ್ದು, ರೈತರು ಕೃಷಿ ಚಟುವಟಿಕೆಗಳಾದ ಕಳೆ ತೆಗೆಯುವುದು, ಕುಂಟೆ ಹೊಡೆಯುವುದು ಇತ್ಯಾದಿ ಕೆಲಸಗಳನ್ನು ಮುಂದುವರೆಸಬಹುದು.
- ರಾಗಿ, ತೊಗರಿ, ಪಾಪ್ ಕಾರ್ನ್ ಮುಂತಾದ ಬೆಳೆಗಳಲ್ಲಿ ಅಂತರ ಬೇಸಾಯ ಮಾಡಿ ಕಳೆಯನ್ನು ತೆಗೆಯಲು ಸೂಚಿಸಲಾಗಿದೆ
- ರಾಗಿಯಲ್ಲಿ ಬೆಂಕಿರೋಗ ತೀವ್ರವಾಗಿ ಕಂಡುಬಂದಲ್ಲಿ ಬೀಮ್ (ಟ್ರೈಸೈಕ್ಲಜ಼ೋಲ್) ಶಿಲಿಂದ್ರನಾಶಕವನ್ನು 0.6 ಗ್ರಾಂನಷ್ಟು ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಲು ಸೂಚಿಸಲಾಗಿದೆ.
- ರಾಗಿ ಮತ್ತು ಮುಸುಕಿನ ಜೋಳಕ್ಕೆ ಶಿಫಾರಸ್ಸು ಮಾಡಿದ ಸಾರಜನಕವನ್ನು ಮೇಲುಗೊಬ್ಬರವಾಗಿ ಕೊಡಲು ಸೂಚಿಸಲಾಗಿದೆ
- ಬಸಿಗಾಲುವೆಗಳನ್ನು ಸ್ವಚ್ಚ ಮಾಡಬೇಕು ಮತ್ತು ಹೊಲಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು.
- ಅಲ್ಪಾವಧಿಯ ದ್ವಿದಳ ದಾನ್ಯ ಬೆಳೆಗಳ ತಳಿಗಳಾದ ಉದ್ದು (ರಶ್ಮಿ), ಅಲಸಂದೆ (ಟಿ.ವಿ.ಎಕ್ಸ್-944, ಸಿ-೧೫೨), ಅವರೆ (ಹೆಚ್,ಎ-3,4) ಮತ್ತು ಹುರಳಿ (ಕೆ,ಬಿ,ಹೆಚ್-1, ಪಿ,ಹೆಚ್,ಜಿ-9) ಬಿತ್ತನೆ ಮಾಡಬಹುದು.

ದ್ರಾಕ್ಷಿ: ದ್ರಾಕ್ಷಿ ಹಾಗೂ ಇತರೆ ತರಕಾರಿ ಬೆಳೆಗಳಲ್ಲಿ ಕಂಡುಬರುವ ರಸ ಹೀರುವ ಕೀಟಗಳಾದ ಥ್ರಿಪ್ಸ್, ನುಸಿ, ಬಿಳಿ ನೊಣಗಳ ಹಾವಳಿ ಕೀಟಗಳ ನಿಯಂತ್ರಣಕ್ಕೆ ಇಮಿಡಾಕ್ಲೋಪ್ರಿಡ್ ಅಥವಾ ಬೇವಿನ ಎಣ್ಣೆ ಅಥವಾ ಕೀಟನಾಶಕಗಳನ್ನು ಸಿಂಪಡಿಸಲು ಸೂಚಿಸಲಾಗಿದೆ.

ಪಾಪ್ ಕಾರ್ನ್:

ಕಾಂಡ ಕೊರೆಯುವ ಹುಳು ಕಂಡುಬಂದರೆ:

ಕ್ಲೋರೊಪೈರಿಫ಼ಾಸ್ ಅನ್ನು ೧.೫ ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು ಸೂಕ್ತ.

ಗುಲಾಬಿ:

ಕಪ್ಪು ಚುಕ್ಕೆ ರೋಗ:

- ✓ ಕಳೆಗಳನ್ನು ತೆಗೆದು ಹಾಕಿ ಹೊಲವನ್ನು ಸ್ವಚ್ಚವಾಗಿಡಿ.
- ✓ ರೋಗ ತೀವ್ರವಾಗಿದ್ದಲ್ಲಿ ಮ್ಯಾಂಕೊಜೆಬ್ (೨ ಮಿ.ಲೀ/ಪ್ರತಿ ಲೀಟರ್ ನೀರಿಗೆ) ಅಥವಾ ಕವಚ್ (೨ ಮಿ.ಲೀ/ಪ್ರತಿ ಲೀಟರ್ ನೀರಿಗೆ) ಅಥವಾ ಮಾಸ್ಟರ್ ಅನ್ನು ಸಿಂಪಡಿಸಿ.

ಹೂ ಕೋಸು ಹಾಗೂ ಎಲೆ ಕೋಸುವಿನಲ್ಲಿ ಎಲೆ ತಿನ್ನುವ ಹುಳು (ಡೈಮಂಡ್ ಬ್ಯಾಕ್ ಮಾತ್):

ಇವುಗಳನ್ನು ಹತೋಟಿ ಮಾಡಲು **ಕ್ವಿನಾಲ್ಫಾಸ್** ಅಥವಾ **ಕ್ಲೋರೊಪೈರಿಫ಼ಾಸ್** ಅನ್ನು ೨.೫ ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು ಸೂಕ್ತ.

ನೋಡಲ್ ಅಧಿಕಾರಿ
ಡಾ||ಎಮ್.ಬಿ. ರಾಜೇಗೌಡ
ಬೆಂಗಳೂರು

This document was created using Smart PDF Creator. To remove this message purchase the Product at www.SmartPDFCreator.com